8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರ ವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ವಾಲಿತ್ಯಗಳಿಗೆ ಗವರ್ಮೆಂಟಿನವರು ಜವಾಬುದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯ್ತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿ ಇರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರ್ರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಿದವರ ಹೆಸರು.	ಕಟ್ಟಿದಾಗ ಕಂದಾಯ.	ಜಮೀನು. ಸರ್ವೆ ನಂಬರ್ ಅಥವಾ ಹಿಸ್ಸೆ ನಂಬರ್ ಅಥವಾ ಖಾನಾ ಬುಮಾರಿ ನಂಬರ್	ವಿಸ್ತೀರ್ಣ.	ಅಕಾರ.	ಸರ್ಕಾರಕ್ಕೆ ಬರಬೇಕಾದ ಪಟ್ಟಿ ಮೇಲಣ ಸಗ್ಗೇರಿ ಸಹಿತವಾದ ಬಾಕಿ ಜಮಾಬಂದಿಗಳು.	
							ಎ. ಗು.	ರೂ. ಆ. ಪೈ.	ರೂ. ಆ. ಪೈ.	
ನಾಗಮಂಗಲ.	ಹೊಣಕೆರೆ.	ಹೊಳಲ್ಕೆರೆ.	ಬಾಕೀದಾರ್ರು ಹುಲ್ಲಿಕೆರೆ ಸೂರಪ್ಪ, ತಿಂದಪ್ಪ ರಾಮಣ್ಣ.	....	...	...	ಪರಂಪೋಕು.	212 26	3 4 0	140 14 3 ಐ.
							ಖುಷ್ಕಿ	304 3	337 4 0	0 8 0 ನೋಟಿಸ್ ಫೀ
							ಬಾಗಾಯ್ತು.	1 19	4 0 0	1 0 0 ಜಪ್ತಿ ಹರಾಜ್
							ಇನಾಮತಿ..	1 13	5 12 0	
							ಜುವ್ವಾ ..	519 21	350 4 0	142 6 3

ಹರಾಜು ತಾರೀಖು ವರಗೆ ಲೆಕ್ಕಾ ಚಾರದ ಮೇರಿಗೆ ಕೊಡಬೇಕಾದ ಬಡ್ಡಿ ಸಹ ಕೊಡಬೇಕು.

ಎಂ. ಕಾಂತರಾಜ ಅರಸ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—1906ನೆ ಇಸವಿ ನಂಬರು 7ನೆ ರೆಗ್ಯುಲೇಷನ್ ಅನುಸರಿಸಿ ಈ ಕೆಳಗೆ ತಪಶೀಲು ಕಾಣುವ ಜಕ್ಕು ಬಂದಿ ಬಳಿಗೊಂಡಿರುವ ಶಿವಮೊಗ್ಗಾ ಟವನನ್ನು ಬಂದು ಕಾಯಂ ಮುನಿಸಿಪಾಲಿಟಿಯಾಗಿ ಮಾಡಬೇಕೆಂತ ಆಲೋಚನೆ ಇರುತ್ತದೆ. ಇದಕ್ಕೆ ಆಕ್ಷೇಪಣೆ ತೆಗದುಕೊಳ್ಳುವ ತಮಾಂ ಜನಗಳು ಈ ನೋಟಿಸ್ ಮೈಸೂರು ಗೆಜೆಟನಲ್ಲಿ ಘಾಯಿಷಾಪ ಎರಡು ತಿಂಗಳು ವಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಲ್ಲಿಗೆ ತಮ್ಮ ತಮ್ಮ ಆಕ್ಷೇಪಣೆ ಅಂಕ ಕುರಿತು ಅದಕ್ಕೆ ಕಾರಣ ಸಮೇತ ಅಪ್ಲಿಕೇಷನ್ ಗುಜರಾಯಿಸಿಕೊಳ್ಳತಕ್ಕದ್ದು.—

ಉತ್ತರಕ್ಕೆ.—ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಲಿಂಗಪ್ಪನ ಪಾಳ್ಯ ಬಂಗಲೆಯ ಕಾಂಪೌಂಡು ವಳಗೊಂಡು ಮುನಿಸಿಪಲ್ ರಸ್ತೆ ಮಾರ್ಗವಾಗಿ ಪೂರ್ವಕ್ಕೆ ಹೋಗಿ ಡೆಪ್ಯುಟಿ ಕಮಿಷನರವರ ಬಂಗಲೆ ಮತ್ತು ಎಗ್ಜಿಕ್ಯೂಟಿವ ಇಂಜನಿಯರ್ ಆಫೀಸನ್ನು ಕೇರಿಸಿಕೊಂಡು ಶಿವಮೊಗ್ಗ ಗ್ರಾಮದ 30ನೆ ಸರ್ವೆ ನಂಬರು ಜಮೀನು ಹತ್ತರ ಹೊನ್ನಾಳಿ ರಸ್ತೆಗೆ ಕೇರಿ ಆ ರಸ್ತೆ ಮಾರ್ಗವಾಗಿ ಸದರಿ ರಸ್ತೆಯ ಸೋಮಯ್ಯನವರ ಕೆರೆ ಏರಿ ಮೇಲಿನ ರಸ್ತೆಯನ್ನು ಸಂಧಿಸುವ ಸ್ಥಳದಲ್ಲಿ ಮುಳ್ಳಕೆರೆ ಗ್ರಾಮದ ಸರ್ವೆ ನಂಬರು 60ನೆ ಜಮೀನು ಬಳಿ ಇರುವ ಆಕ್ಟ್ರಾಯಿ ಉಕ್ಕಡದವರಿಗೆ.

ದಕ್ಷಿಣಕ್ಕೆ.—ಆಗುಂಬೆ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಹೊಸ ಟವನು ಬಜಾವಣೆ ಜಾಗಾದಲ್ಲಿ ಇರುವ ಆಕ್ಟ್ರಾಯಿ ಕಟ್ಟೆ ಸಮೀಪದಲ್ಲಿ ಇರುವ ತುಂಗಾನದಿ ಸೇತುವೆಯ ದಕ್ಷಿಣ ಪ್ರಾಂತದ ವರಿಗೂ ತುಂಗಾನದಿಯನ್ನ ವಳಗೊಂಡು ಹಳೆ ಘಾರೆಸ್ಟು ಲಾಜ್ಜ್ ಮತ್ತು ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ವರಿಗೆ ಇರುವ ಇಸಲಾಪುರ ಗ್ರಾಮದ ಮನೆಗಳನ್ನು ಕೇರಿಸಿಕೊಂಡು ಸದರಿ ಇಸಲಾಪುರ ಗ್ರಾಮದ 16, 15, 14 ಮತ್ತು 13ನೆ ಸರ್ವೆ ನಂಬರು ಜಮೀನುಗಳ ವರಿಗೆ.

ಪೂರ್ವಕ್ಕೆ.—ಇಸಲಾಪುರ ಗ್ರಾಮದ ಸರ್ವೆ ನಂಬರು 19ನೆ ಜಮ್ಮಿ ಲಾಗಾಯಿತ್ತು ತಿವಪ್ಪೊಗ್ಗಾದಿಂದ ಹೊಳೆಹೊನ್ನೂರಿಗೆ ಹೋಗುವ ರಸ್ತೆಯಲ್ಲಿ ಇರುವ ಗಡಿಕಲ್ಲಿನಬಳಿ ಸದರಿ ರಸ್ತೆಯನ್ನುದಾಟಿ 26, 25, 24, 21ನೆ ಸರ್ವೆ ನಂಬರು ಜಮ್ಮಿಗಳ ಮಾರ್ಗವಾಗಿ ಹಳೇ ಡಿಸ್ಟ್ರಿಲೇರಿ ಕಟ್ಟಡದ ವರಿಗೆ ಬಂದು ಅಲ್ಲಿಂದ ತುಂಗಾ ನದಿ ಸೇತುವೆಯ ಪಶ್ಚಿಮ ದಿಕ್ಕಿನ ತುದಿ ವರಿಗೆ ಹೋಗಿ ಅಲ್ಲಿಂದ ಆಕ್ಟ್ರಾಯಿ ಕಟ್ಟೆ ಮುಂಭಾಗದಲ್ಲಿ ತಿರುಗಿ ಹೊನ್ನಾಳಿ ರಸ್ತೆ ಮಾರ್ಗವಾಗಿ ಸೋವ್ಯುಯ್ಯನವರ ಕೆರೆ ಏರಿ ಮೇಲೆ ಹಾದು (1ನೆ ಕ್ಲಾಸಿನಲ್ಲಿ ನಮೂದು ಮಾಡಿರುವ ಮುಳ್ಳಕೆರೆ ಗ್ರಾಮದ ಸರ್ವೆ ನಂಬರು 60ನೆ ಜಮ್ಮಿಬಳಿ) ಹೊನ್ನಾಳಿ ರಸ್ತೆಕ್ಕೂಡುವ ಸ್ಥಳದಲ್ಲಿ ಇರುವ ಆಕ್ಟ್ರಾಯಿ ಕಟ್ಟೆವರಿಗೆ.

ಪಶ್ಚಿಮಕ್ಕೆ.—ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತ್ತು ಹೋದಿಗ್ಗೆರೆ ಮುರಿಗೇಂದ್ರಪ್ಪನ ಬಂಗಲೆಯನ್ನು ಬಳಿಗೊಂಡು ಸದರಿ ರಸ್ತೆ ಮಾರ್ಗವಾಗಿ ದಕ್ಷಿಣಕ್ಕೆ ಸಿಲ್ವೇದಾರ ಲಾಯ ಮತ್ತು ಲೈನಗಳು ಮತ್ತು ಮಿಳ್ಳಗಟ್ಟ ಗ್ರಾಮದ 113, 114ನೆ ಸರ್ವೆ ನಂಬರು ಜಮ್ಮಿಗಳನ್ನು ಬಳಿಗೊಂಡು ಆಗುಂಬೆ ರಸ್ತೆಯಲ್ಲಿ ಇರುವ ಗಡಿಕಲ್ಲು ಬಳಿ ತುಂಗಾನದಿ ವರಿಗೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಇನ್ಸ್ತಿ ಹಾರ್‌ನಾಮೆ.

ತಾರೀಖು 3ನೆ ಏಪ್ರೆಲ್ 1907ನೆ ಇಸವಿ, ಚಿಕ್ಕಮಗಳೂರು.

ಸ್ವ॥ 1901ನೆ ಇಸವಿ ಡಿಸೆಂಬರು 11ನೆ ಮರ್ತ್ಯಂ ನಂಬರು 9,007—ಲೆ. ಜೆ. 56ನೆ ಗವರ್ನ್‌ಮೆಂಟು ನೋಟಿಫಿಕೇಷನ್ 5ನೆ ಪ್ಯಾರಾ ವೇರಿಗೆ ಕಡೂರು ಡಿಸ್ಟ್ರಿಕ್ಟಿನಲ್ಲಿ ಹರಿಯುವ ತುಂಗಾ ಮತ್ತು ಭದ್ರಾ ನದಿಗಳಲ್ಲಿ ಚಾಲ್ತಿ ಸ್ವ॥ 1907ನೆ ಸಾಲ್ ಏಪ್ರೆಲ್ 1ನೆ ತಾರೀಖು ಲಾಗಾಯಿತು ಸೆಪ್ಟಂಬರು 30ನೆ ತಾರೀಖು ವರಿಗೆ ಮೀನುಗಳನ್ನು ಹಿಡಿಯುವುದನ್ನು ಮೋಖೂಫ್ ಮಾಡಿ ಇದೆ.

ಡಿ. ದೇವರಾಜ ಅರಸ್,
ಡೆಪ್ಯುಟಿ ಕಮಿಷನರ್.

ಸ್ವ॥ 1907ನೆ ಇಸವಿ ಏಪ್ರೆಲ್ ತಾರೀಖು 6.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, 1907ನೆ ಇಸವಿ ಜುಲೈ ಗುರೆ ಲಾಗಾಯಿತು 1908ನೆ ಇಸವಿ ಜೂನ್ ಆಖೈರ ವರಿಗೆ 1 ವರುಷಕ್ಕೆ ಕಡೂರು ಡಿಸ್ಟ್ರಿಕ್ಟಿನಲ್ಲಿನ ಇದರಡಿ ಕಾಣಿಸಿರುವ ಟೋಲು ಗೇಟುಗಳಲ್ಲಿ ಟೋಲ್‌ಯಾನೆ ಸುಂಕವನ್ನು ವಸೂಲು ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ನಂಬರು.	ಟೋಲ್‌ಗೇಟು ಹೆಸರು.	ಹರಾಜು ತಾರೀಖು.	ಹರಾಜು ನಡೆಯುವ ಸ್ಥಳ.
1	ತಡಸ (ಭದ್ರಾನದಿಯ ಸೇತುವೆ)	18ನೆ ಮೇ 1907 ...	ಎಡೇಹಳ್ಳಿ ಸಬ್ ತಾಲ್ಲೂಕು ಕಛೇರಿಯಲ್ಲಿ.
2	ಹರಿಹರಪುರ (ತುಂಗಾನದಿ ಸೇತುವೆ) ...	20ನೆ ಡಿಟ್ಟೋ ...	ಕೊಪ್ಪದ ತಾಲ್ಲೂಕು ಕಛೇರಿಯಲ್ಲಿ.
3	ಬಾಳೆಹೊನ್ನೂರು (ಭದ್ರಾನದಿ ಸೇತುವೆ)	23ನೆ ಡಿಟ್ಟೋ	ಬಾಳೆಹೊನ್ನೂರು ಮುಸಾಫರ್ ಬಂಗಲೆಯಲ್ಲಿ.

2. ಎಲ್ಲಾ ಸವಾಲುಗಳಿಂತಲೂ ಜಾಸ್ತಿ ಯಾದ ಛಡ ದರಖಾಸ್ತು ಸಂಯಾಗಿ ಕಂಡುಬಂದಲ್ಲಿ ಗವರ್ನ್‌ಮೆಂಟಿ ವ್ಯಾಜ್ಯಾರಿಗೆ ಬಳಿಪಟ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಅಂಗೀಕರಿಸಲ್ಪಡುತ್ತೆ. ಛಡ ದರಖಾಸ್ತನ್ನಾಗಲಿ ಯಾ ಇತರ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದ್ದನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳ್ಳವರಾಗಿರುತ್ತಾರೆ.

3. ಛಡ ದರಖಾಸ್ತುದಾರನು ಹರಾಜಾದ ಕೂಡಲೆ ಹರಾಜು ಮೊಬಲಗಿನ ಪೈಕಿ ಮೂರನ್ನೇ ಬಾಗ ಅಂಕ್ಷ ಮೊಬಲಗನ್ನು ನಗದಾಗಿ ಅಥವಾ ಡೆಪ್ಯುಟಿ ಕಮಿಷನರವರಿಗೆ ಪಾವತಿ ಮಾಡಬಹುದೆಂಬ ಷರಾ ಬರಿಸಲ್ಪಟ್ಟ ಗವರ್ನ್‌ಮೆಂಟ್ ಆರ್ಡರ್ ಇಂಡಿಯಾ ಪ್ರೊನೋಟು ಮೂಲಕವಾಗಿ ಡಿಪಾಜಿಟ್ಟು ಇಡಬೇಕು. ಹಾಗೂ ರೂಪಾಯಿ ಬಂದರ ಬಂದಾಣಿಯಂತೆ ಆ ಮೊಬಲಗಿನ ಮೇಲೆ ಆಗುವ ಲೋಕಲ್ ಸೆಸ್ ಸಹಾ ಕೊಡಬೇಕು. ಗವರ್ನ್‌ಮೆಂಟಿನಿಂದ ಹರಾಜು ವ್ಯಾಜ್ಯಾರಾಗಿ ಬಂದವರಿಂದ ಬಾಕಿ ಮೊಬಲಗನ್ನು ಲೋಕಲ್ ಸೆಸ್ ಸಹಿತ ಸದರಿ ಟೋಲ್ ಗೇಟು ಯಾವ ತಾಲ್ಲೂಕಿನಲ್ಲಿದೆಯೋ ಆ ತಾಲ್ಲೂಕು ಖಜಾನೆಗೆ 1907ನೆ ಆಗಸ್ಟು ತಾರೀಖು 10ರ ಲಾಗಾಯಿತು ಸಮಾನಾದ ಎಂಟು ಖಿಸ್ತು ಗಳಾಗಿ ಪ್ರತಿ ತಿಂಗಳ 10ನೆ ತಾರೀಖಿಗೆ ಪಾವತಿ ಮಾಡಬೇಕು. ಡಿಪಾಜಿಟ್ಟಿನ ಮೊಬಲಗು 9—10—11—12ನೆ ಖಿಸ್ತು ಗಳಿಗೆ ಜಮೆ ಮಾಡಿಕೊಳ್ಳಲ್ಪಡುತ್ತೆ. ದರಖಾಸ್ತುದಾರನು ಮಾಹೆವಾರ ಖಿಸ್ತು ನ್ಯೂಟೀಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಇಬ್ಬರನ್ನು ಜಾಮೀನು ಕೊಡಬೇಕು. ಮತ್ತು ಹರಾಜು ವ್ಯಾಜ್ಯಾರು ಸಂಪೂರ್ಣ ತಿ